# ಬೇಂದ್ರೆ ವಿರಚಿತ ರಾಮಾಯಣೋಪಾಖ್ಯಾನ

**ಡಾ. ಸೈಯದ್ ಮುಯಿನ್**
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು–560077
syedmuen@kristujayanti.com

ರಾಮಾಯಣ ಮಹಾಕಾವ್ಯವು ಎಲ್ಲಾ ಕಾಲಘಟ್ಟದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಬ್ಬ ಸಾಹಿತಿ, ಚಿಂತಕನಿಗೆ ಕಾಡಿದ ವಿಷಯಗಳನ್ನು ಹೊಂದಿರುವ ಬೃಹದ್ ಗ್ರಂಥವಾಗಿದೆ. ಕೆಲವರಿಗೆ ರಾವಣ ನಾಯಕನಾಗಿ ಕಂಡು ಆತನ ಉದಾತ್ತತೆಯನ್ನು ಚಿತ್ರಿಸಿದರೆ, ಮತ್ತೆ ಕೆಲವರು ಸೀತೆಯ ದೃಷ್ಟಿಯಲ್ಲಿ ರಾಮಾಯಣವನ್ನು ಕಟ್ಟಿಕೊಟ್ಟರು, ಮಂದುವರೆದು ಹನುಮನ ದೃಷ್ಟಿಯಲ್ಲಿ ರಾಮಾಯಣದ ಕಥಾಹಂದರವನ್ನು ಬಿತ್ತಿದರು, ರಾಮನ ಆದರ್ಶಗಳು, ಪಿತೃವಾಕ್ಯ ಪರಿಪಾಲನೆ, ಏಕಪತ್ನಿವ್ರತ ಧರ್ಮ, ರಾಜನ ಕರ್ತವ್ಯಗಳು, ಪ್ರಜಾಹಿತಾಸಕ್ತಿ ಇತ್ಯಾದಿಗಳು ಸದಾ ಕಾಲ ಭಾರತೀಯ ಸಂಸ್ಕೃತಿಗಳಿಗೆ ಪೂರಕವಾಗಿ ರೂಪುಗೊಂಡವು. ವಿಭಿನ್ನ ಕಥಾಶೈಲಿಯನ್ನು ಹೊಂದಿರುವ ನೂರಾರು ಜನಪದ ರಾಮಾಯಣದ ಕಥನಗಳು ನಮ್ಮ ಮುಂದಿವೆ. ಇಲ್ಲೆಲ್ಲ ರಾಮ, ಸೀತೆ, ಲಕ್ಷ್ಮಣ, ಹನುಮ, ರಾವಣ, ವಿಭೀಷಣ, ಧಶರಥ, ವಾಲಿ, ಸುಗ್ರೀವ, ಭಿನ್ನ ಭಿನ್ನ ಪಾತ್ರ ಪಾತಳಿಯಲ್ಲಿ ಭಿನ್ನ ಅಭಿವ್ಯಕ್ತಿ ಕ್ರಮಗಳಾಗಿ ಕಂಡರೆಆಧುನಿಕ ಭಾರತೀಯ ಸಾಹಿತ್ಯದಲ್ಲಿ ಕೈಕೆ, ಮಂಥರೆ, ಊರ್ಮಿಳೆಯ ದೃಷ್ಟಿಯಲ್ಲಿ ರಾಮಾಯಣ ರಚಿಸಿ, ಈ ಸಣ್ಣ ಪಾತ್ರಗಳನ್ನು ಸೀತೆಯಷ್ಟೇ ಸಮಾನ ಸ್ಥಾನಮಾನವನ್ನು ನೀಡಿ, ಇವರುಗಳ ಹೆಸರಿನಲ್ಲೇ ಅಧ್ಯಾಯಗಳು ಸೃಷ್ಟಿಕೊಂಡವು, ಈ ಸಾಲಿನಲ್ಲಿ ನಾಗಚಂದ್ರನ ರಾಮಾಯಣ, ಮೈಥಿಲಿ ಶರಣಗುಪ್ತ ಅವರ ಸಾಕೇತ, ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಅಂತಹ ಬೃಹತ್ ಮಹಾಕಾವ್ಯಗಳು ನಿಂತರೆ, ಬೇಂದ್ರೆ ಅವರೂ ಸಹ ತಾವು ರಾಮಾಯಣವನ್ನು ಕಂಡಂತೆ ಸಣ್ಣ ಕವನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅದರ ವಿಮರ್ಶಾತ್ಮಕ ಪರಿಚಯ ಇಲ್ಲಿ ನೀಡಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಮೊದಲ ಕವಿ ಎಂದು ಗುರುತಿಸಿಕೊಳ್ಳುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಪೌರಾಣಿಕ ಪ್ರಸಂಗಗಳ ಕುರಿತು ಹಲವು ಕವನಗಳನ್ನು ರಚಿಸಿದ್ದಾರೆ. ಧರ್ಮದ ಕುರಿತಾಗಿ ಬರೆದಿರುವ ವಿಚಾರಗಳು, ಚಿಂತನೆಗಳು ಧರ್ಮದ ಮೂಲ ಆಶಯವನ್ನು ಎತ್ತಿ ಹಿಡಿಯುವಂತಹವೇ ಆಗಿದೆ. ಧರ್ಮ, ಜಾತಿ, ಭಾಷೆಯು ವ್ಯಕ್ತಿನಿಷ್ಠವಾಗಿರಬೇಕೆಂಬುದು ಬೇಂದ್ರೆ ಅವರ ಆಶಯವು, ಧ್ಯೇಯವೂ ಆಗಿತ್ತು. ಬೇಂದ್ರೆ ಮಾನವೀಯ ಸಂಬಂಧಗಳ ಕುರಿತು ಕಾವ್ಯ ರಚನೆಯ ಜತೆಗೆ ಆಧ್ಯಾತ್ಮಿಕ, ಭಕ್ತಿ ಪ್ರಧಾನ ವಸ್ತುವನ್ನುಳ್ಳ ಕಾವ್ಯ ರಚನೆ ಮಾಡಿರುವುದಾಗಿ ಗಮನಿಸಬಹುದು. ಇದರಲ್ಲಿ ಕೆಲವು ಭಜನೆಗಳಿಗೆ, ಪ್ರಾರ್ಥನ ಗೀತೆಗಳಾಗಿದ್ದು, ಕೆಲವು ವಿಮರ್ಶಾತ್ಮಕ ಕವನಗಳೂ ಆಗಿವೆ. ಈ ಕವನಗಳ ಸಂಕ್ಷಿಪ್ತ ನೋಟ ಈ ಪ್ರಬಂಧದಲ್ಲಿ ನೀಡಲು ಪ್ರಯತ್ನಿಸಲಾಗಿದೆ.

DOI: 10.59176
http://www.kristujayantijournal.com/index.php/KJKSP

ಜೀವನದ ಅರ್ಥಗಳನ್ನು ಮತ್ತು ಶಾಶ್ವತವಾದ ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಕ್ಷಣವು ಶೋಧಿಸುತ್ತಾ ಬಂದಿರುವ ಬೇಂದ್ರೆ ಅವರು ಯಾವುದೇ ಬೌದ್ಧಿಕ ಕಸರತ್ತಿಗೆ ಬರೆಯ ಹೊರಟವರಲ್ಲ, ತಮ್ಮದೇ ಸ್ವತಂತ್ರಭಾವವಿದ್ದು ಎಲ್ಲದರ ಸರ್ವತೋಮುಖ ಬೆಳವಣಿಗೆಯೇ ಜೀವನದ ಗುರಿಯೆಂದು ನಂಬಿ ಬದುಕಿದವರು ಮತ್ತು ತಮ್ಮ ಸಾಹಿತ್ಯದಲ್ಲಿ ಅದನ್ನೇ ಬಿಂಬಿಸಿದರು. ಬೇಂದ್ರೆ ಅವರಿಗೆ ಅಸಮಾನತೆ, ಶೋಷಣೆಯು ರೊಚ್ಚಿಗೆಬ್ಬಿಸುತ್ತದೆ. ರಾಮಾಯಣದಲ್ಲಿ ನಡೆದ ಪಾತ್ರಗಳ ಬಗೆಗಿನ ತಾರತಮ್ಯ, ಅಸಮಾನತೆಯನ್ನು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣಬಹುದು. ಕೃತಿಯೊಂದನ್ನು ರಚಿಸುವ ಸಂದರ್ಭದಲ್ಲಿ ಲೇಖಕನು ತಾನು ಹೇಳಬೇಕಿರುವ ಆದರ್ಶಗಳನ್ನು, ಮೌಲ್ಯಗಳನ್ನು ಗಮನದಲ್ಲಿಟ್ಟುಕೊಂಡು ಪಾತ್ರಗಳ ಸೃಷ್ಟಿಯೂ ಸಾಗುತ್ತಾ ಹೋಗುತ್ತದೆ. ವಿಷಯ, ಸಂದರ್ಭಗಳಿಗೆ ಹೆಚ್ಚು ಒತ್ತು ನೀಡುವ ಭರದಲ್ಲಿ ಕಥಾಹಂದರದ ಇತರ ಪಾತ್ರಗಳು ಗೌಣವಾಗುವುದು ಸಹಜ. ಇದಕ್ಕೆ ಕವಿ/ಸಾಹಿತಿಯ ತಪ್ಪಲ್ಲ, ಆದರ್ಶ, ಮೌಲ್ಯಗಳ ನಿರ್ವಹಣೆಯ ಸಂದರ್ಭದಲ್ಲಿ ಇಂತಹ ಅಚಾತುರ್ಯ ಕಾರ್ಯಗಳು ಜರುಗುತ್ತವೆ. ಇದನ್ನು ತಿದ್ದುಪಡಿಸಲೆಂದೆ ಮುಂದಿನ ಸಾಹಿತಿಗಳು ಗೌಣ ಪಾತ್ರಗಳನ್ನು ಹೊಸ ಆಯಾಮದೊಂದಿಗೆ ಓದುಗರಿಗೆ ನೀಡುವುದರ ಮೂಲಕ ಗೌಣ, ಅಗಣಿತ ಪಾತ್ರಗಳಿಗೆ ಸಮಾನ ಸ್ಥಾನಮಾನವನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಕುವೆಂಪು ಅವರೇ ಹೇಳಿದಂತೆ 'ಇಲ್ಲಿ ಯಾರೂ ಮುಖ್ಯರಲ್ಲ, ಇಲ್ಲಿ ಯಾರೂ ಅಮುಖ್ಯರಲ್ಲ'ವೆಂಬಂತೆ ರಾಮಾಯಣದಲ್ಲಿ ಬರುವ ಪ್ರತಿ ಪಾತ್ರವು ತನ್ನ ಸ್ಥಾನದಲ್ಲಿ ಸಮಾನ ಸ್ಥಾನಮಾನವನ್ನು ಹೊಂದಿದೆ.

ಬೇಂದ್ರೆ ಅವರು ತಮ್ಮ ಕವಿತೆಯ ವಿಧಿಯ ಬಗೆಗೆ ಹೇಳುತ್ತಾರೆ: 'ನನ್ನ ಕಾವ್ಯವೆಲ್ಲಾ ಭಾವನಿಷ್ಠ; ಅಂತೆ ಕಾವ್ಯ ಭಗವಂತನ ಭಕ್ತಿಗೆ ಶರಣಾಗಬೇಕು, ಭಕ್ತಿ ಕಾಮವೇ ಪುರುಷಾರ್ಥವಾದರೆ, ಮಾನವತೆಯ ಕಾಲುಷ್ಯ ಕಳೆದೀತು...[೧] ಮಾನವೀಯ ಮೌಲ್ಯಗಳ ಉದ್ದೀಪನ, ಎಲ್ಲಾ ಜೀವಿಗೂ ಸಮಾನತೆ, ಸಾಹಿತಿಯ ಸಾಹಿತ್ಯದ ಜೀವಾಳ ಎಂಬಂತೆ ಪುರಾಣ ಪಾತ್ರಗಳ ಹೊಸ ಆಯಾಮದಲ್ಲಿ ನೀಡಿರುವುದನ್ನು ಬೇಂದ್ರೆ ಅವರ ಕಾವ್ಯದ ಮೂಲಕ ಗಮನಿಸಬಹುದು.

ಕೆ.ಎಸ್.ನರಸಿಂಹಸ್ವಾಮಿ ಅವರ 'ದೀಪವು ನಿನ್ನದೆ ಗಾಳಿಯೂ ನಿನ್ನದೆ' ಕವನದ ಸಾಲೊಂದರಲ್ಲಿ ಬರುವ 'ಆ ಮಹಾಕಾವ್ಯ, ಈ ಭಾವಗೀತೆ ನಿನ್ನ ಪದಕದಿ' ಎನ್ನುವಂತೆ ಮಹಾಕಾವ್ಯದಷ್ಟೇ ಸತ್ವ, ಶಕ್ತಿಯನ್ನು ಸಣ್ಣ ಕಾವ್ಯವೂ ಹೊಂದಿರುತ್ತದೆ ಎಂಬ ಭಾವ ಬೇಂದ್ರೆ ಅವರ ಕಾವ್ಯದಲ್ಲಿ ಕಾಣಬಹುದು. ರಾಮಾಯಣಕ್ಕೆ ಸಂಬಂಧಪಟ್ಟ ಬೃಹತ್ಕಾವ್ಯವನ್ನು ರಚಿಸದಿದ್ದರು ರಾಮಾಯಣದ ಬಹುಮುಖ್ಯ ಪ್ರಸಂಗಗಳನ್ನು ಸಮಕಾಲೀನ ಸಂಗತಿಗಳಿಗೆ ಅನ್ವಯಿಸಿ ಬರೆದಿರುವುದು ಸೂಕ್ತವಾಗಿದೆ. ಈ ಕವನಗಳಲ್ಲೇ ಬೇಂದ್ರೆ ಅವರ ಸಾಹಿತ್ಯದ ಆಶಯದ, ಮನೋಭೂಮಿಕೆಯನ್ನು ಕಾಣಬಹುದು.

ರಾಮಾಯಣ ಮಹಾಕಾವ್ಯದ ಪ್ರಮುಖ ಘಟನೆಗಳನ್ನಾಧರಿಸಿ ವರಕವಿ ಬೇಂದ್ರೆ ಅವರು ರಚಿಸಿರುವ ಪ್ರಮುಖ ಕವನಗಳು ಇಂತಿವೆ – 'ಆದಿಕವಿ[೨]', 'ರಾಮಾವತಾರ[೩]', 'ರವಿ ಕುಲದ ಬಾಲಕ[೪]', 'ಅಹಲ್ಯೆ[೫]', 'ಚೈತ್ರ–ರಾಮ–ಧ್ಯಾನ ಪ್ರಗಾಥ[೬]', 'ರಾಮಾಯಣಾ![೭]', 'ನೂರಾರು ರಾಮಾಯಣ ಕೇಳೀ ಕೇಳೀ[೮]', 'ರಾಮನಾಮ್[೯]', 'ಜೋ ಜೋ ಶ್ರೀರಾಮಾ[೧೦]', 'ನಹಿ–ರಾವಣಗು ನೋಟೀಸು[೧೧]', 'ಶ್ರೀರಾಮಾ·ಜಯರಾಮಾ[೧೨]', 'ಸುಮಂಗಲಾ

ಸೀತಾರಾಮಂಗೆ[೧೩]', 'ಜಾನಕಿ ಹೃದಯ[೧೪]', 'ಸೀತಾ ಮಾಡಿದ ಶೋಕಾ[೧೫]' ಎಂಬ ಪ್ರಮುಖ ಕವನಗಳನ್ನು ರಚಿಸಿದ್ದು ಈ ಕವನಗಳ ಚರ್ಚೆಯನ್ನು ಕೆಳಗಿನಂತೆ ಮಾಡಲಾಗಿದೆ. ಮೇಲೆ ಉಲ್ಲೇಖಿತ ಕೆಲವು ಕವನಗಳ ಮೂಲಕ ರಾಮಾಯಣದ ಹೊಸ ಅಧ್ಯಾಯವನ್ನೇ ಬರೆದಂತೆ ಓದುಗರಿಗೆ ಭಾಸವಾಗುತ್ತದೆ.

ವಾಲ್ಮೀಕಿ ರಾಮಾಯಣ ರಚನೆಗೆ ಪ್ರೇರಣೆಯಾದ ಘಟನೆಯನ್ನು ವಸ್ತುವನ್ನಾಗಿಸಿಕೊಂಡು ರಚಿಸಿರುವ 'ಆದಿಕವಿ' ಕವನವು ಬೇಡನ ಬೇಟೆಯು, ಪಕ್ಷಿಯ ಆಕ್ರಂದನವು, ಶೋಕವು ಆದಿಕವಿಯ ಉಗಮಕ್ಕೆ ಪ್ರೇರೇಪಣೆಯಾಯಿತೆಂಬ ಭಾವ ಈ ಕವನದ್ದಾಗಿದೆ. ಪಕ್ಷಿಯ ಶೋಕ ಶ್ಲೋಕವಾದ ಬಗೆಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ರಾಮಾವತಾರ ಕವನದಲ್ಲಿ ಶ್ರೀರಾಮನ ಜೀವನದ ಅನೇಕ ಘಟನೆಗಳ ವರ್ಣನೆ ಮಾಡಿದ್ದಾರೆ. ಭರತ ಮಿಲಾಪ, ರಾವಣ ಸಂಹಾರ, ಸೀತಾ ಅಗ್ನಿಪರೀಕ್ಷೆ ಮುಂತಾದ ಪ್ರಸಂಗಗಳ ಮೂಲಕ ರಾಮನ ಪರಿಪೂರ್ಣ ಬದುಕಿನ ಚಿತ್ರಣವನ್ನು ಸಣ್ಣ ಸಣ್ಣ ಸಾಲಿನ ಮೂಲಕ ನೀಡಿದ್ದಾರೆ. 'ರವಿ ಕುಲದ ಬಾಲಕ' ಕವನವು ಶ್ರೀರಾಮನಿಗೆ ರಾಮಚಂದ್ರನೆಂದು ಕರೆಯಲು ಕಾರಣವಾದ ಘಟನೆಯನ್ನು ಪುನರುಚ್ಚಿಸಿರುವುದನ್ನು ಕಾಣಬಹುದು. ಆಗಸದಲ್ಲಿನ ಚಂದ್ರನನ್ನು ಹಠದಿಂದ ಬೇಡಿದ ರಾಮನಿಗೆ ಅದರ ಬಿಂಬವನ್ನು ತೋರಿಸಿ ಸಮಾಧಾನಪಡಿಸಿದ ಪ್ರಚಲಿತ ಘಟನೆಯನ್ನು ಎರಡು ಚರಣಗಳ ಮೂಲಕ ಕವನ ರಚಿಸಿರುವುದನ್ನು ಕಾಣಬಹುದು.

ಅಹಲ್ಯೋದ್ಧಾರವನ್ನು ಬೇಂದ್ರೆ ಅವರ 'ಅಹಲ್ಯೆ' ಎಂಬ ಕವನದಲ್ಲಿ ಕಾಣಬಹುದು, ಈ ಕವನದಲ್ಲಿ ಪದಗಳ ಲಾಲಿತ್ಯ, ಪದ ಜೋಡಣೆಯನ್ನು ಅಹಲ್ಯೆಯ ಪತನವನ್ನು ಗೌತಮನ ದೃಷ್ಟಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಪತಿವ್ರತೆಯಾದ ಅಹಲ್ಯೆಯನ್ನು ಕುಲಟೆಯೆಂದು ನಿಂದಿಸಿ ಆಕೆಯ ಭಾವಗಳನ್ನು ಕಲ್ಲಾಗಿಸಿದ್ದ ಗೌತಮ ರಿಷಿಯ ಶಾಪದಿಂದ ವಿಮೋಚನೆಗೆ ಪತ್ನಿವ್ರತ ರಾಮನ ಸಾನಿಧ್ಯವೇ ಕಾರಣವಾಗುವುದನ್ನು ಬೇಂದ್ರೆ ತಮ್ಮ ಶಬ್ದ ಚಮತ್ಕಾರದಿಂದ ಚಿತ್ರಿಸಿದ್ದಾರೆ. ಸತ್ತ್ವದಲ್ಲಿಯೂ ನಲ್ಲೆಯಾಗಿರುವ ಅಹಲ್ಯೆ ಗೌತಮನ ಶಾಪದಿಂದ ಕಲ್ಲಾದರೆ ರಾಮನ ಪಾದಸೋಂಕಿನಿಂದ ಮತ್ತೆ ಪತಿವ್ರತ ನಲ್ಲೆಯಾಗುತ್ತಾಳೆ.

'ನಹಿ–ರಾವಣಗು ನೋಟೀಸು' ಎಂಬ ಕವನದಲ್ಲಿ ಹನುಮನ ಜನ್ಮ ವೃತ್ತಾಂತವನ್ನು, ರಾಮಾವತಾರದ ಸಂದರ್ಭದಲ್ಲಿ ರಾಮನಿಗೆ ಹನುಮ ಮಾಡಿದ ಸಹಾಯವನ್ನು, ಸಮುದ್ರೋಲ್ಲಂಘನ, ಸೀತಾ ಶೋಧನಾ, ಅಶೋಕವನ ಪ್ರವೇಶ, ಲಂಕಾದಹನವನ್ನು, ಸೀತಾರಾಮರ ನಡುವೆ ಬೆಸುಗೆಯನ್ನು ಬಿತ್ತಿದವ ಹನುಮನ ವರ್ಣನೆ ಮಾಡುತ್ತಾ, ರಾಮನ ಶಕ್ತಿ, ಪರಾಕ್ರಮವನ್ನು ಅಹಿ ರಾವಣ–ಮಹಿ ರಾವಣ ಮತ್ತು ರಾವಣನ ಮುಂದೆ ಸಾರಿದ ಹನುಮ, ಪ್ರತಿಯೊಬ್ಬ ಮನುಷ್ಯನಲ್ಲಿ ಅಂತರ್ಗತವಾಗಿರುವ ರಾವಣನನ್ನು ಬಡಿದೋಡಿಸುವ ಕಾರ್ಯದಲ್ಲಿ ಪ್ರವೃತ್ತವಾಗಿರುವ ಕ್ರಿಯೆ ಹನುಮನದ್ದಾಗಿದೆ ಎಂಬುದನ್ನು ಹೇಳಲು ನಹಿ(ಇಲ್ಲದಿರುವ)ರಾವಣನಿಗೂ ಎಚ್ಚರಿಕೆಯ ನೋಟೀಸನ್ನು ಕಳುಹಿಸುವ ಹನುಮನ ಕಾರ್ಯ ಇಲ್ಲಿ ಕಾಣಬಹುದು.

'ರಾಮಾಯಣಾ!' ಕಾವ್ಯದಲ್ಲಿ ಬೇಂದ್ರೆ ಅವರು ರಾಮಾಯಣವನ್ನು ಭಿನ್ನ ದೃಷ್ಟಿಯಲ್ಲಿ ಚಿತ್ರಿಸಿದ್ದಾರೆ. ರಾಮಾಯಣವು ಸೀತಾ ಶೋಕ, ಸೀತೆಯ ಕಷ್ಟಗಳಿಂದ ತುಂಬಿದ ಮಹಾಕಾವ್ಯವಾಗಿ ಬಿಂಬಿಸಲ್ಪಟ್ಟಿದೆ, ಕುವೆಂಪು

DOI: 10.59176
http://www.kristujayantijournal.com/index.php/KJKSP

ಮತ್ತು ಮೈಥಿಲಿ ಶರಣಗುಪ್ತರು ಊರ್ಮಿಳೆಯ ಪಾತ್ರಕ್ಕೆ ಪ್ರಾತಿನಿಧ್ಯ ಕೊಟ್ಟಿದ್ದರೆ, ಇವರಿಗಿಂದ ಒಂದು ಹೆಜ್ಜೆ ಮುಂದೆ ಹೋಗಿ ಬೇಂದ್ರೆ ಅವರು ಭರತ ಮತ್ತು ಶತ್ರುಘ್ನರ ಪತ್ನಿಯರಾದ ಮಾಂಡವಿ ಮತ್ತು ಶ್ರುತಕೀರ್ತಿಯ ಬಗೆಗೆ ಪ್ರಸ್ತಾಪ ಮಾಡಿದ್ದಾರೆ.

ರಾಮಾಯಣದ ಅಶ್ರುತಧ್ವನಿಯಾಗಿರುವ ಬೇಂದ್ರೆ ಅವರ 'ರಾಮಾಯಣಾ!' ಕಾವ್ಯವು ಉದಯರಾಗ ಶೈಲಿಯಲ್ಲಿರುವ ವಿಶಿಷ್ಟ ಕಾವ್ಯವಾಗಿದೆ. ಈ ಕಾವ್ಯ ಪ್ರಾರಂಭವಾಗುವುದೇ ಪಾತ್ರಗಳಲ್ಲಿ ಕಂಡುಬರುವ ತಾರತಮ್ಯದ ಶೋಕದ ಮೂಲಕ, ಸೀತೆಯ ವಿಲಾಪದಿಂದ ತುಂಬಿರುವ ರಾಮಾಯಣವು ಇತರ ಹೆಣ್ಣುಗಳ ಶೋಕ, ವಿಲಾಪವನ್ನು ಏಕೆ ಗೌಣವನ್ನಾಗಿಸಿದೆ ಎನ್ನುತ್ತಾ ಇತ್ತೀಚಿನ ಕವಿಗಳು ಊರ್ಮಿಳೆ ವಿಲಾಪವನ್ನು, ತಪಸ್ಸಿನ ಶ್ರೇಷ್ಠತೆಯನ್ನು ಬಣ್ಣಿಸಿದ್ದಾರೆ, ಊರ್ಮಿಳೆಯ ಹಾಗೆ ಇರುವ ಮಾಂಡವಿ, ಶ್ರುತಕೀರ್ತಿಯನ್ನು ಮರೆತರೆ ಇವರೆಲ್ಲ, ಇವರ ಗೋಳು, ರೋದನ, ವಿಲಾಪವನ್ನು ಏಕೆ ಇತರ ಕವಿಗಳು ಕಾಣದಾದರು, ಕೇವಲ ಸೀತೆ, ಊರ್ಮಿಳೆಯ ವಿಲಾಪವಷ್ಟೇ ಅಲ್ಲ, ಹಲವು ಹೆಣ್ಣುಗಳ ಆರ್ತನಾದದ ಘೋರ್ಗರೆತ ರಾಮಾಯಣವಾಗಿರುವುದಾಗಿ ಬೇಂದ್ರೆ ಚಿತ್ರಿಸಿದ್ದಾರೆ.

ರಾಮ, ಸೀತೆಯ ನವರಸಗಳ ರಸೋವೈಭವವು ರಾಮಾಯಣದಲ್ಲಿ ತುಂಬಿದ್ದರೆ, ಇವರ ಪ್ರತಿಯೊಂದು ಕ್ರಿಯೆಗೂ ಮಹತ್ವವಿರುವುದಾದರೆ, ಊರ್ಮಿಳೆ, ಮಾಂಡವಿ ಮತ್ತು ಶ್ರುತಕೀರ್ತಿಗಳ ಪಾತ್ರವು ಆದಿಕವಿಗೆ, ಅಯೋಧ್ಯಾ ಜನರಿಗೆ ಹೆಸರಿಗೆ ಮಾತ್ರ, ಕಾರಣ ಪಾತ್ರಗಳಷ್ಟೇಯೇ? ಎಂಬ ಪ್ರಶ್ನೆಯನ್ನು ಬೇಂದ್ರೆ ಜನರ ಮುಂದಿಡುತ್ತಾರೆ.

ವನವಾಸಕ್ಕೆ ಹೋದ ರಾಮ, ಸೀತೆ ಪರಸ್ಪರ ಜತೆಯಲ್ಲಿದ್ದರು, ಕಷ್ಟ–ಸುಖಗಳಲ್ಲಿ ಒಬ್ಬರಿಗೊಬ್ಬರು ಆಸರೆಯಾಗಿದ್ದರು, ಆದರೆ ಲಕ್ಷ್ಮಣನನ್ನು ಅಗಲಿ ತಾನೂ ಸರಯೂ ನದಿ ತೀರದ ತಪೋವನದಲ್ಲಿ ತಪಕ್ಕೆ ಕುಳಿತ ಊರ್ಮಿಳೆ, ಅರಮನೆಯಲ್ಲಿದ್ದರು ಭರತ – ಮಾಂಡವಿ, ಶತ್ರುಘ್ನ – ಶ್ರುತಕೀರ್ತಿ ಪರಸ್ಪರ ವಿರಹವೇದನೆಯಲ್ಲಿದ್ದರು, ಸೀತೆ ತನ್ನ ಗಂಡನೊಂದಿಗೆ ಕಾಡಲ್ಲಿ ಕಷ್ಟದಿಂದ ಬದುಕುತ್ತಿದ್ದರು ಸುಖದಿಂದಿದ್ದಳು, ಆದರೆ ಆಕೆಯ ತಂಗಿಯರು ಮಾತ್ರ ತಮ್ಮ ಗಂಡಂದಿರೊಟ್ಟಿಗಿದ್ದು ದೂರವಾಗಿ ವಿರಹದಿಂದ ಬದುಕಿದ ಪರಿಯನ್ನು ಕವಿ ಸೊಗಸಾಗಿ ಬಣ್ಣಿಸಿದ್ದಾರೆ.

ಬೇಂದ್ರೆ ಹೇಳುವಂತೆ 'ಸೀತಾ ವಿರಹವು ತುಂಬಿದೆ ರಾಮಾಯಣಾ ಸಣ್ಣವರತ್ತರೆ ಎಣಿಕೆಗೆ ಬಾರದು ಅಯ್ಯೋ ನಾರಾಯಣಾ.' ಈ ಸಾಲು ಕೇವಲ ಸೀತೆ ಮತ್ತು ಆಕೆಯ ತಂಗಿಯರಿಗೆ ಮಾತ್ರ ಅನ್ವಯಿಸದೆ ಸಮಾಜದ ವ್ಯವಸ್ಥೆಯನ್ನು ಪ್ರದರ್ಶಿಸುತ್ತದೆ. ಸಿರಿವಂತರು, ಅಧಿಕಾರಿಗಳು ತಮ್ಮ ದಿನನಿತ್ಯದ ಬದುಕಿನಲ್ಲಿ ಆಗುವ ಸಣ್ಣ ಪುಟ್ಟ ತೊಂದರೆಗಳನ್ನು ದೊಡ್ಡದ್ದಾಗಿ ಚಿತ್ರಿಸುವ ಸನ್ನಿವೇಶಗಳನ್ನು ಇಲ್ಲಿ ಸಮೀಕರಿಸಬಹುದು. ಬಡವರ ನೋವು, ಗೋಳು, ಹಾಹಾಕಾರವು ಕೆಲವರಿಗೆ ಕಂಡುಕಾಣದಂತೆ ಕ್ಷಣಾರ್ಧದಲ್ಲಿ ಮಾಯವಾಗಿ ಬಿಡುತ್ತವೆ. ನಿರ್ಲಕ್ಷ್ಯಕ್ಕೆ ಒಳಪಟ್ಟವರು ಇತಿಹಾಸದ ಪುಟಗಳಲ್ಲಿ ಯಾವುದೇ ಮಾನ್ಯತೆಯನ್ನು ಪಡೆಯದೆ ಮಾಯವಾಗಿ ಬಿಡುತ್ತಾರೆ. ಅಂತಹದ್ದೇ ಸ್ಥಿತಿಯು ಮಾಂಡವಿ, ಶ್ರುತಕೀರ್ತಿಗೆ ಒದಗಿರುವುದಾಗಿ ಬೇಂದ್ರೆ ಅವರ ಅಹವಾಲಾಗಿದೆ. ರಾಮಾಯಣದ ಪಾತ್ರಗಳ ಮೂಲಕ ಪ್ರಸ್ತುತ ಸಮಾಜದ ಸ್ಥಿತಿಗಳನ್ನು ಈ ಕಾವ್ಯದ ಮೂಲಕ ಅರ್ಥೈಸಬಹುದು.

DOI: 10.59176
http://www.kristujayantijournal.com/index.php/KJKSP

ಮುಂದುವರೆದು ಕವಿ ಅಶೋಕವನದಲ್ಲಿ ಪ್ರಲಾಪಿಸಿದ ಶೋಕವನ್ನು ಅಯೋಧ್ಯಾ ಜನರಿಗೂ ತಲುಪಿತು ಆದರೆ ಅರಮನೆಯಲ್ಲೇ ಇದ್ದು ವಿರಹವೇದನೆ ಅನುಭವಿಸುತ್ತಿರುವ, ಶೋಕದ ಮಡುವಿನಲ್ಲಿ ಮುಳುಗಿರುವ ಮಾಂಡವಿ, ಶ್ರುತಕೀರ್ತಿಯರ ದುಃಖವು ಯಾರಿಗೂ ಬೇಡವಾಗಿದೆ. ರಾಮ ಸೀತೆಯರ ಭಾವನೆಗಳು ಗಂಗಾ–ಸಾಗರದ ಹಾಗೆ ಪವಿತ್ರ ಹಾಗೂ ವಿಶಾಲವಾದುದು, ಆದರೆ ಮಾಂಡವಿ ಶ್ರುತಕೀರ್ತಿ ಅವರ ಭಾವನೆಗಳು ಸದ್ದಿಲ್ಲದೆ ಹರಿಯುವ ಸರಯೂ ನದಿಯ ಮದುತ್ವದಲ್ಲಿ ಯಾವುದೇ ಕೋಲಾಹಲವಿಲ್ಲದೆ ಇದ್ದು ಇರದ ಹಾಗೆ ಹರಿದ ರೀತಿಯದು ಎಂದು ಈ ಪಾತ್ರಗಳ ಮೂಲಕ ಸಾಮಾನ್ಯ ಮಾನವನ ಬದುಕು ಸಹ ದೇವ ಜೀವನದ ಮುಂದೆ ಅನಾಮಿಕವಾಗಿರುವುದಾಗಿದೆ ಎಂಬುದನ್ನು ತಿಳಿಸಿದ್ದಾರೆ.

ಸೀತಾ ಶೋಕ, ವಿಲಾಪ, ರಾವಣನ ವಧೆ, ರಾಮನ ಗುಣ ಪ್ರದರ್ಶನ, ಆದಿಕವಿ ವಾಲ್ಮೀಕಿಯ ಶೋಕಗಾಯನವೇ ರಾಮಾಯಣವಾಗಿದೆ. ಭಾರತದ ಭೂಮಿಯಲ್ಲಿ ಪ್ರತಿಯೊಬ್ಬರ ಶ್ವಾಸೋಚ್ಛ್ವಾಸದಲ್ಲಿ ರಾಮಾ ರಾಮಾ ಎನ್ನುವ ಬಗೆ ಕಂಡು ಬರುತ್ತದೆ. ರಾಮನ ಜೀವನ ಆದರ್ಶಗಳೇ ನಮಗೆ ಮುಖ್ಯವಾಗುತ್ತದೆಯೇ ಹೊರತು ಸಾಮಾನ್ಯ ಮಾನವನ ಜೀವನ ಆದರ್ಶಗಳು ಗೌಣವಾಗುವುದು, ರಾಮಾಯಣದ ಕೋಡಿ ಹರಿದು ನಮ್ಮೆಲ್ಲರ ಜೀವನ ಹುಲುಸಾಗಿದೆ. ರಾಮನ ರಾಮಾಯಣ ಪಾರಾಯಣವೇ ಮುಖ್ಯವಾಗಿದೆ, ಆತನ ಆದರ್ಶಗಳು, ಕಾರ್ಯಗಳು ನಮ್ಮ ಜೀವನದ ಭಾಗವನ್ನಾಗಿಸಿಕೊಂಡಿಲ್ಲ. ಹಾಗೆಯೇ ಜೀವನವನ್ನು ಸಮಗ್ರ ದೃಷ್ಟಿಯಲ್ಲಿ ನೋಡಬೇಕೇ ಹೊರತು ಕೇಂದ್ರ ವ್ಯಕ್ತಿಯ ಭಾವ, ಭಾವನೆಗಳ ಮೂಲಕ ಇಡೀ ಜೀವನವನ್ನು ಅಳೆಯುವುದು ತೂಗುವುದು ಸರಿಯಲ್ಲ ಎಂಬುದು ಈ ಕಾವ್ಯದ ತಾತ್ಪರ್ಯವಾಗಿದೆ.

ರಾಮನವಮಿಯ ಸಲುವಾಗಿ ರಚಿಸಿದ 'ಸುಮಂಗಲಾ ಸೀತಾರಾಮಂಗೆ!' ಕವನವು ಕೇವಲ ರಾಮ, ಸೀತೆ, ಲಕ್ಷ್ಮಣ ಹಾಗೂ ಹನುಮನ ಬಹುಪರಾಕಿಗೆ ಸೀಮಿತವಾಗದೆ ರಾಮಾಯಣದ ಪ್ರಮುಖ ಪ್ರತಿ ಘಟನೆಗಳನ್ನು, ಇತರೆ ಅಲಕ್ಷಿತ ಪಾತ್ರಗಳನ್ನು ನೆನೆಯುತ್ತಾ ರಾಮನವಮಿಯ ಉತ್ಸವಕ್ಕೆ ನಾಂದಿಪದ್ಯದಂತೆ ರಚಿಸಿರುವುದು ಗಮನಾರ್ಹ. ಕೌಸಲ್ಯ, ಕೈಕೆ, ಸುಮಿತ್ರ, ಊರ್ಮಿಳಾ, ಶ್ರುತಕೀರ್ತಿ, ಮಾಂಡವಿ, ರಿಷಿ ಮುನಿಗಳು, ವನ ಪರ್ವತಗಳನ್ನು ನೆನೆದಿರುವುದನ್ನು ಕಾಣಬಹುದು. ನೆರಳಾಗಿ ಬಂದಂಗೆ ಎಂದರೆ ಲಕ್ಷ್ಮಣ, ತಪಸ್ಸಿಗೆ ನಿಂದಂಗೆ ಊರ್ಮಿಳೆ, ಪಾದುಕೆಯ ಕಾದ ಕಂದಂಗೆ ಭರತನಿಗೆ ಹೀಗೆ ರಾಮಾಯಣದ ಪ್ರಮುಖ ಘಟನೆಗಳಿಗೆ ಸಾಕ್ಷಿಯಾದ ಪ್ರತಿಯೊಂದು ಪಾತ್ರಕ್ಕೆ ಇಲ್ಲಿ ನ್ಯಾಯ ಕೊಡಿಸಿರುವುದನ್ನು ಕಾಣಬಹುದು. 'ಜಾನಕಿ ಹೃದಯಾ' ಎಂಬ ಕವನವು ದೈವರಕ್ಷಣೆಯನ್ನು ಬೇಡುವ ಸರಳ ಕವನವಾಗಿದೆ. ಶ್ರೀರಾಮನಲ್ಲಿ ಅಭಯಯಾಚಿಸುವ ಪ್ರಾರ್ಥನಾ ಗೀತೆ ಇದಾಗಿದೆ. ಶ್ರೀರಾಮನ ಸಾಹಸಗಳನ್ನು ಬಣ್ಣಿಸುವ ರಕ್ಷಾಗುಣಗಳನ್ನು ಹೊಗಳುವ ಸರಳ ಕವನ ಜಾನಕೀ ಹೃದಯಾವಾಗಿದೆ.

'ಸೀತಾ ಮಾಡಿದ ಶೊಕಾ' ಎಂಬ ಕವನವು ಸೀತಾ ಚರಿತ್ರೆಯನ್ನು ಸರಳವಾಗಿ, ಮನೋಜ್ಞವಾಗಿ ಓದುಗರಿಗೆ ಒದಗಿಸುತ್ತದೆ. ಸೀತೆಯ ಶೋಕದ ಅರಿವು ಸಾಮಾನ್ಯ ಲೋಕಕ್ಕಿಂತ ಹೆಚ್ಚಾಗಿ ಪ್ರಕೃತಿಗೆ ಇರುವುದಾಗಿ ಹೇಳುತ್ತ, ಸೀತೆಯ ದುಃಖ ಅರಿವು ಪ್ರಕೃತಿಗಾದಷ್ಟು ಜನಸಾಮಾನ್ಯರಿಗಾಗಲಿಲ್ಲ ಎಂಬುದನ್ನು ಸೀತೆಯ ದುಖದ ಮೂಲಕ ಇಡೀ ರಾಮಾಯಣದ ಕತೆಯನ್ನು ಕವನದ ಮೂಲಕ ಕಟ್ಟಿಕೊಟ್ಟಿದ್ದಾರೆ. ಮಾಯಾಮೃಗದ

ಬೇಡಿಕೆಯಿಂದ ಉಂಟಾದ ರಾಮಾ ವಿಯೋಗ, ಯುದ್ಧದ ನಂತರ ಅಗ್ನಿ ಪರೀಕ್ಷೆ, ಸೀತೆಗಾದ ಲೋಕಾಪಾವಾದ, ಮತ್ತೆ ವನವಾಸ, ಮಕ್ಕಳನ್ನು ರಾಮನಿಗೆ ಒಪ್ಪಿಸಿ ಭೂಮಿಯಿಂದ ಉದಯಿಸಿದ ಸೀತೆ ಮತ್ತೆ ಭೂಗರ್ಭವನ್ನು ಸೇರುವುದರ ಮುಖಾಂತರ ತನ್ನ ಇಡೀ ಜೀವನದಲ್ಲಿ ದುಃಖ, ಶೋಕವನ್ನು ಅನುಭವಿಸಿದ ಸೀತಾ ಶೋಕವನ್ನು ಜಗತ್ತು ಅರಿಯುವುದಿಲ್ಲ ಎಂಬ ವ್ಯಾಖ್ಯೆಯನ್ನು ನೀಡಿದ್ದಾರೆ. 'ಜೋ ಜೋ ಶ್ರೀರಾಮಾ' ಎಂಬುದು ಜೋಗುಳ ಹಾಡಾಗಿದೆ. ಅಪಾರದೈವಭಕ್ತಿ ಮತ್ತು ಆಧ್ಯಾತ್ಮಿಕ ಚಿಂತನೆಗಳನ್ನು ಹೊಂದಿದ್ದ ಬೇಂದ್ರೆ ಅವರು ಶ್ರೀರಾಮನನ್ನು ಆಧ್ಯಾತ್ಮಕ ಸಾಧನೆಯ ಮತ್ತು ಮುಕ್ತಿಯ ಮಾರ್ಗವನ್ನಾಗಿ ನಂಬಿದ್ದವರಾಗಿದ್ದರು.

ರಾಮಾಯಣದ ಕುರಿತು ಬೇಂದ್ರೆ ಅವರು ರಚಿಸಿರುವ ಕವನಗಳಲ್ಲಿ ಆಧ್ಯಾತ್ಮ ಮತ್ತು ಅನುಭಾವವನ್ನು ಕಾಣುವುದಕ್ಕಿಂತ ರಾಮಾಯಣದ ಪಾತ್ರಗಳ ವಿವೇಚನೆ, ವಿಶ್ಲೇಷಣೆ ಮತ್ತು ಪುನರ್ ವ್ಯಾಖ್ಯಾನವನ್ನು ಕಾಣಬಹುದು. ಇದರಲ್ಲಿ ಕೆಲವು ಕವನಗಳು ಭಕ್ತಿಪೂರ್ಣವಾಗಿಯೂ ಇವೆ. ಕಿರಂ ನಾಗರಾಜ್ ಹೇಳುವಂತೆ 'ಪ್ರಕೃತಿಯನ್ನು , ಮನುಷ್ಯ ಪ್ರಕೃತಿಯನ್ನು ಬದಲಿಸುದ ಕವಿ'[೧೬] ಅಂದರೆ ಸಾಮಾನ್ಯ ಮನುಷ್ಯ ಪ್ರಪಂಚವನ್ನು ನೋಡುವ ಕ್ರಮವನ್ನು ಬದಲಿಸುವಂತೆ ಪ್ರೇರೇಪಿಸುವ ಶಕ್ತಿ ಇವರ ಕಾವ್ಯದ್ದಾಗಿದ್ದು ಎಂದರೆ ತಪ್ಪಾಗಲಾರದು. ಇಂತಹದೇ ಪ್ರಯತ್ನವನ್ನು ರಾಮಾಯಣದ ಪಾತ್ರಗಳಿಗೆ ಬೇಂದ್ರೆ ಅವರು ಮಾಡಿರುವುದನ್ನು ಗಮನಿಸಬಹುದು.

ಭಾಷೆ, ಛಂದಸ್ಸು ಮತ್ತು ಅಲಂಕಾರದ ಶ್ರೀಮಂತ ಬಳಕೆಯು ಬೇಂದ್ರೆ ಅವರ ಕಾವ್ಯಶೈಲಿಯ ಬಹುಮುಖ್ಯವ ಅಂಗವಾಗಿದೆ. ಭಾಷೆಯ ಮಡಿವಂತಿಕೆಯನ್ನು ಬೇಂದ್ರೆ ಅವರ ಕಾವ್ಯದಲ್ಲಿ ಕಾಣುವುದು ಅಸಾಧ್ಯ. ಅಚ್ಚಗನ್ನಡ, ಸಂಸ್ಕೃತಭೂಯಿಷ್ಠ ಕನ್ನಡ, ಆಡುನುಡಿ, ಹಳ್ಳಿಗನ್ನಡ, ಮಿಶ್ರಗನ್ನಡ, ಉತ್ತರ ಕರ್ನಾಟಕ ಭಾಗದ ಕನ್ನಡವು ಯತೇಚ್ಛವಾಗಿ ಬಳಕೆಯಾಗಿದ್ದು, ಇಲ್ಲಿ ಭಾಷಾಶೈಲಿಯೇನೇ ಇರಬಹುದು ಭಾಷೆಯು ಕವಿಯ ಭಾವನೆಗಳ ಸಮರ್ಪಕ ವಾಹಕವಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿರುವುದನ್ನು ಇಲ್ಲಿ ಕಾಣಬಹುದು. ಬೇಂದ್ರೆ ಅವರ ಬಹುತೇಕ ಕಾವ್ಯಗಳಲ್ಲಿ ಅನುರಣಿಸುವ ಮೃದುಪದಗಳು ಅಪೂರ್ವವಾದ ನಾದಬಂಧುರತೆಯನ್ನು ಗಮನಿಸಬಹುದು. ಭಾವದಷ್ಟೇ, ಛಂದಸ್ಸಿಗೂ ಮಹತ್ವ ಕೊಟ್ಟಿರುವ ಪ್ರಮುಖ ಕವಿಗಳಲ್ಲಿ ಬೇಂದ್ರೆ ಅವರು ಒಬ್ಬರಾಗಿದ್ದಾರೆ. ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ರಾಮಾಯಣದ ವಿಷಯಗಳಿಗೆ ಹೊಸ ದೃಷ್ಟಿಕೋನವನ್ನು ನೀಡುವ ಪ್ರಯತ್ನವನ್ನು ಬೇಂದ್ರೆ ಅವರು ತಮ್ಮ ಕಾವ್ಯದ ಮೂಲಕ ವಿಶಿಷ್ಟವಾಗಿ ರಚನೆ ಮಾಡಿದ್ದಾರೆ. ವ್ಯಕ್ತಿನಿಷ್ಠ ನೆಲೆಗಳ ಅಸ್ತಿತ್ವದ ಶೋಧನೆಯು ಈ ಕಾವ್ಯಗಳಲ್ಲಿ ಕಾಣಬಹುದು. ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯಾದ ವಿಚಾರಗಳು, ಪುರಾಣದೊಂದಿಗಿನ ಅನುಸಂಧಾನ ಮತ್ತು ಸಂಘರ್ಷ, ಪುರಾಣಗಳ ಪುನರ್‌ವ್ಯಾಖ್ಯಾನ ಮತ್ತು ಹೊಸ ಪುರಾಣಗಳ ನಿರ್ಮಾಣವನ್ನು ಬೇಂದ್ರೆ ಅವರ ಕಾವ್ಯ ಮಾಡಿದ್ದು ಅದರ ವ್ಯಾಖ್ಯಾನ ಮಾಡಲಾಗಿದೆ.

**ಕೊನೆ ಟಿಪ್ಪಣಿಗಳು**

೧. ದ.ರಾ.ಬೇಂದ್ರೆ (ಜೀವನ ಚರಿತ್ರೆ):ಎನ್ಕೆ ಕುಲಕರ್ಣಿ, ನವಕರ್ನಾಟಕ ಸಾಹಿತ್ಯ, ಬೆಂಗಳೂರು, ೨೦೦೪.
೨. ಔದುಂಬರಗಾಥೆ: ಬೇಂದ್ರೆ ಸಮಗ್ರ ಕಾವ್ಯ ನಮನ, ಸಂಪುಟ–೧, ಸಂಪಾದಕರು– ವಾಮನ ಬೇಂದ್ರೆ, ಡಾ.ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩, ಪುಟ ಸಂಖ್ಯೆ ೨೩೩.

೩. ..."... ಪುಟ ಸಂಖ್ಯೆ ೬೫.
೪. ..."... ಪುಟ ಸಂಖ್ಯೆ ೭೨.
೫. ..."... ಪುಟ ಸಂಖ್ಯೆ ೬೬.
೬. ..."... ಪುಟ ಸಂಖ್ಯೆ ೬೭
೭. ..."... ಪುಟ ಸಂಖ್ಯೆ ೭೦.
೮. ..."... ಪುಟ ಸಂಖ್ಯೆ ೭೩.
೯. ..."... ಪುಟ ಸಂಖ್ಯೆ ೭೪.
೧೦. ..."... ಪುಟ ಸಂಖ್ಯೆ ೮೦.
೧೧. ..."... ಪುಟ ಸಂಖ್ಯೆ ೬೮.
೧೨. ..."... ಪುಟ ಸಂಖ್ಯೆ ೭೫.
೧೩. ..."... ಪುಟ ಸಂಖ್ಯೆ ೭೬.
೧೪. ..."... ಪುಟ ಸಂಖ್ಯೆ ೭೭.
೧೫. ..."... ಪುಟ ಸಂಖ್ಯೆ ೭೮.
16.https://ruthumana.com/2017/03/21/kiram_last_leacture/

**ಪರಾಮರ್ಶನ ಗ್ರಂಥಗಳು**

೧. ಔದುಂಬರಗಾಥೆ : ಬೇಂದ್ರೆ ಸಮಗ್ರ ಕಾವ್ಯ ನಮನ, ಸಂಪುಟ–೧, ಸಂಪಾದಕರು– ವಾಮನ ಬೇಂದ್ರೆ, ಡಾ.ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩
೨. ದಾಸ ಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು– ಒಂದು ಸಮೀಕ್ಷೆ: ಸೈಯದ್ ಮುಯಿನ್, ಓದು ಬರಹ ಬಳಗ, ಬೆಂಗಳೂರು, ೨೦೧೧.
೩. ಕುವೆಂಪು ಹನುಮದ್ದರ್ಶನ : ಡಾ.ಜಿ.ಕೃಷ್ಣಪ್ಪ, ಉದಯಭಾನು ಕಲಾಸಂಘ, ಬೆಂಗಳೂರು, ೨೦೨೦